OS No.187 /2014 DW-1

ದಿನಾಂಕಃ **17-01-2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎನ್ ಜಿ ವಕೀಲರಿಂದಃ

1. ವಾದಿಯ ತಂದೆ ಎನ್.ಟಿ.ತಿಮ್ಮಯ್ಯರವರನ್ನು ನಾನು ನೋಡಿರುತ್ತೇನೆ. ಸುಮಾರು 50 ವರ್ಷಗಳಿಂದ ವಾದಿ ಮತ್ತು ಅವರ ತಂದೆ ನಮ್ಮ ಗ್ರಾಮದಲ್ಲಿಯೇ ವಾಸವಾಗಿರುತ್ತಾರೆ. ವಾದಿಯು ಈ ದಾವೆಯನ್ನು 5 ಜನರ ವಿರುದ್ಧ ಹೂಡಿರುತ್ತಾರೆ. ನಾನು 5 ನೇ ಪ್ರತಿವಾದಿ. 1 ರಿಂದ 4 ನೇ ಪ್ರತಿವಾದಿಗಳು ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪಂದಿರ ಮಕ್ಕಳಾಗಿರುತ್ತಾರೆ. 1 ನೇ ಪ್ರತಿವಾದಿ ಕಣುಮಪ್ಪನ ಮಗ ಎಂದರೆ ಸರಿ . 2 ರಿಂದ 4 ನೇ ಪ್ರತಿವಾದಿಗಳು ಲಿಂಗಪ್ಪನ ಮಕ್ಕಳು ಎಂದರೆ ಸರಿ . ಕಣುಮಪ್ಪ ಮತ್ತು ಲಿಂಗಪ್ಪನ ಕುಟುಂಬಕ್ಕೆ ಇರುವಂತಹ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ . ಕಣುಮಪ್ಪ ಮತ್ತು ಲಿಂಗಪ್ಪನನ್ನು ನಾನು ನೋಡಿರುತ್ತೇನೆ. ಕಣುಮಪ್ಪ ಮತ್ತು ಲಿಂಗಪ್ಪ ಅವರ ಜೀವಿತ ಕಾಲದಲ್ಲೆ ಅವರ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಅನುಭೋಗದಲ್ಲಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ತೀರಿಕೊಂಡ ನಂತರ ಅವರ ಮಕ್ಕಳು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನ್ಯಾಯಾಲಯದಲ್ಲಿ ವಿಭಾಗ ಮಾಡಿಕೊಂಡಂತಹ ದಾಖಲೆಯನ್ನು ನಾನು ನೋಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

2. ವಿಭಾಗಕ್ಕಾಗಿ ಹೂಡಿದಂತಹ ದಾವೆಯಲ್ಲಿ ಅವರ ಕುಟುಂಬದ ಎಲ್ಲಾ ಆಸ್ತಿಗಳನ್ನು ಸೇರಿಸಿರುತ್ತಾರೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಸೇರಿಸಿರುವುದಿಲ್ಲ ಎಂದು ಉತ್ತರಿಸಿ , ಮುಂದುವರೆದು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ , ನ್ಯಾಯಾಲಯದಲ್ಲಿ ವಿಭಾಗ ಮಾಡಿಕೊಂಡು ಆಸ್ತಿ ಕೊಡುತ್ತೇವೆ ಎಂದು ಹೇಳಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ದಾವೆಯಲ್ಲಿ ಯಾವ ಯಾವ ಆಸ್ತಿಗಳನ್ನು ಸೇರಿಸಿರುತ್ತಾರೆ ಎಂದು ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುವುದಿಲ್ಲ. ಸರ್ವೇ ನಂ.102/6 ಮತ್ತು ಸರ್ವೇ ನಂ.102/7 ಕ್ಕೆ ಸಂಬಂಧಿಸಿದಂತೆ ಡಿಕ್ರಿ ಮಾಡಿಕೊಂಡಿರುತ್ತಾರೆ . ನ್ಯಾಯಾಲಯದ ಡಿಕ್ರಿಯಂತೆ 1 ಎಕರೆ 9 ½ ಗುಂಟೆ ಕಣುಮಯ್ಯನವರ ಪಾಲಿಗೆ , 1 ಎಕರೆ 9 ಗುಂಟೆ ಲಿಂಗಪ್ಪನ ಪಾಲಿಗೆ ಹೋಗಿರುತ್ತದೆ.

3. ವಾದಿಯು ಯಾವ ಆಧಾರದ ಮೇಲೆ ಈ ದಾವೆಯನ್ನು ಹೂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯು ಈ ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1 ರಿಂದ 4 ನೇ ಪ್ರತಿವಾದಿಗಳು ಹೂಡಿರುವಂತಹ ಪ್ರತಿವಾದ ಪತ್ರದ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ರಿಂದ 4 ನೇ ಪ್ರತಿವಾದಿಗಳು ಹೂಡಿರುವಂತಹ ಪ್ರತಿವಾದ ಪತ್ರದ ಅಂಶಗಳನ್ನು ನಾನು ವಕೀಲರಿಂದ ಕೇಳಿ ತಿಳಿದುಕೊಂಡಿರುವುದಿಲ್ಲ.

4. ದಿಃ 01-12-1969 ರಂದು 1 ನೇ ಪ್ರತಿವಾದಿ ಮತ್ತು ಅವರ ತಂದೆ ಸರ್ವೇ ನಂ.102/3 ರಲ್ಲಿನ ಅವರ ಪಾಲಿನ 1 ಎಕರೆ 22 ಗುಂಟೆ ಜಮೀನನ್ನು ತಿಮ್ಮಯ್ಯ ಬಿನ್ ರಂಗಶಾಮಯ್ಯನವರಿಗೆ ಮಾರಾಟ ಮಾಡಿರುತ್ತಾರೆ ಎಂಬ ವಿಚಾರ ನಿಮಗೆ ಗೊತ್ತಿರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಗೊತ್ತಿರುವುದಿಲ್ಲ , ಆದರೆ ಅದು ಸುಳ್ಳು ಎಂದು ಉತ್ತರಿಸಿರುತ್ತಾರೆ. ತಿಮ್ಮಯ್ಯ ಬಿನ್ ರಂಗಶಾಮಯ್ಯನವರು ದಿಃ 01-12-1969 ರ ಕ್ರಯಪತ್ರದಲ್ಲಿ ದಾವಾ ಸ್ವತ್ತು ಮತ್ತು ಇನ್ನೊಂದು ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.ಕ್ರಯಪತ್ರದ ಆಧಾರದ ಮೇರೆಗೆ ಎಂ.ಆರ್.ನಂ.21/69-70 ರಂತೆ ತಿಮ್ಮಯ್ಯನವರ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಕ್ರಯಪತ್ರ ಆದ ದಿನದಿಂದ ತಿಮ್ಮಯ್ಯ ಬಿನ್ ರಂಗಶಾಮಯ್ಯ ಸರ್ವೇ ನಂ.102/3 ರಲ್ಲಿನ 1 ಎಕರೆ 22 ಗುಂಟೆ ಜಮೀನಿನ ಸ್ವಾಧೀನದಲ್ಲಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸರ್ವೇ ನಂ.102/3 ರ ಪಹಣಿ ತಿಮ್ಮಯ್ಯ ಬಿನ್ ರಂಗಶಾಮಯ್ಯನವರ ಹೆಸರಿನಲ್ಲಿ ಬರುತ್ತಿತ್ತು ಎಂದು ಸೂಚಿಸುವುದು ಸರಿಯಲ್ಲ.

5. ದಿಃ 22-04-1974 ರಂದು ವಾದಿಯ ತಂದೆ ಸರ್ವೇ ನಂ.102/3 ರಲ್ಲಿನ 1 ಎಕರೆ 22 ಗುಂಟೆ ಜಮೀನನ್ನು ತಿಮ್ಮಯ್ಯ ಬಿನ್ ರಂಗಶಾಮಯ್ಯನವರಿಂದ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಕ್ರಯಪತ್ರ ಆದ ದಿನದಿಂದ ವಾದಿಯ ಕುಟುಂಬದ ಸದಸ್ಯರು ಸದರಿ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ವಾದಿಯ ಕುಟುಂಬದ ಸದಸ್ಯರ ಸ್ವಾಧೀನದ ಮೇರೆಗೆ ಆರ್ ಟಿ ಸಿ ಯಲ್ಲಿ ವಾದಿಯ ತಂದೆ ತಿಮ್ಮಯ್ಯ ಸದರಿ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದು ಸುಮಾರು 15 ವರ್ಷಗಳ ಕಾಲ ಆರ್ ಟಿ ಸಿ ಯಲ್ಲಿ ಬಂದಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

6. ವಾದಿಯ ತಂದೆಯ ಹೆಸರಿಗೆ ಕ್ರಯಪತ್ರ ಆಗಿದ್ದರೂ ಸಹ ಖಾತೆ 1 ನೇಪ್ರತಿವಾದಿಯ ತಂದೆ ಕಣುಮಪ್ಪನವರ ಹೆಸರಿನಲ್ಲಿಯೇ ಮುಂದುವರೆಯುತ್ತಿತ್ತು ಎಂದು ಸೂಚಿಸುವುದು ಸರಿಯಲ್ಲ. ಸರ್ವೇ ನಂ.102/3 ರಲ್ಲಿ ನಾನು ಜಮೀನನ್ನು ಖರೀದಿ ಮಾಡುವ ಪೂರ್ವದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದರು. ಎಷ್ಟು ವರ್ಷಗಳಿಂದ 1 ಮತ್ತು 2 ನೇ ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಖರೀದಿ ಮಾಡುವ 50 ವರ್ಷಗಳ ಪೂರ್ವದಿಂದಲೂ 1 ಮತ್ತು 2 ನೇ ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದರು. ನಾನು ಖರೀದಿ ಮಾಡುವ ಪೂರ್ವದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ರಾಗಿ, ಜೋಳ ಮತ್ತು ಇತರೆ ಬೆಳೆಗಳನ್ನು ಬೆಳೆಯುತ್ತಿದ್ದರು.

7. ಸರ್ವೇ ನಂ.102/3 ನಿಟ್ರಹಳ್ಳಿ ಗ್ರಾಮದಿಂದ ½ ಕಿ.ಮೀ ದೂರದಲ್ಲಿರುತ್ತದೆ. ನಾನು ಖರೀದಿ ಮಾಡುವ ಪೂರ್ವದಲ್ಲಿ ಅಣ್ಣ-ತಮ್ಮಂದಿರು ನ್ಯಾಯಾಲಯದಿಂದ ಮಾಡಿಕೊಂಡ ವಿಭಾಗದ ದಾಖಲೆ, ಖಾತೆ ಪಹಣಿಯನ್ನು ನೋಡಿ ಖರೀದಿ ಮಾಡಿರುತ್ತೇನೆ. ನೀವು ಖರೀದಿ ಮಾಡುವ ಪೂರ್ವದಲ್ಲಿ ಸದರಿ ಸ್ವತ್ತಿಗೆ ಸಂಬಂಧಿಸಿದ ಹಳೆಯ ಪಹಣಿ ಮತ್ತು ಈ.ಸಿ. ಗಳನ್ನು ನೋಡಿರುತ್ತೀರಾ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನಗೆ ಕೊಟ್ಟಿರುತ್ತಾರೆ, ನನ್ನ ಹತ್ತಿರ ಇರುತ್ತದೆ ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಿಮಗೆ ಕೊಟ್ಟಂತಹ ಈ.ಸಿ. ಯಲ್ಲಿ ಎಷ್ಟು ವರ್ಷಗಳಿಗೆ ಸಂಬಂಧಿಸಿದ ವಹಿವಾಟಿನ ಬಗ್ಗೆ ನಮೂದಾಗಿರುತ್ತದೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಅವರಿಗೆ ಕೊಟ್ಟಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ, ನಾನು ಖರೀದಿ ಮಾಡಿದ ನಂತರ ನಾನು ತೆಗೆದುಕೊಂಡಿರುತ್ತೇನೆ. ಅದು ಸುಮಾರು 50 ವರ್ಷಗಳಿಗೆ ಸಂಬಂಧಪಟ್ಟಿರುತ್ತದೆ. ವಾದಿಯ ತಂದೆ ತಿಮ್ಮಯ್ಯ ವ್ಯವಸಾಯ ಮಾಡುತ್ತಿದ್ದರು.

8. 1 ನೇ ಪ್ರತಿವಾದಿ ತಂದೆ ಕಣುಮಪ್ಪ ಮತ್ತು 2 ರಿಂದ 4 ನೇ ಪ್ರತಿವಾದಿಗಳ ತಂದೆ ಲಿಂಗಪ್ಪ ಮೊದಲೇ ವಿಭಾಗ ಮಾಡಿಕೊಂಡು ಪ್ರತ್ತೇಕವಾಗಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂದು ಗೊತ್ತಿದ್ದರೂ ಸಹ ಉದ್ದೇಶ ಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

9. ದಾವಾ ಸ್ವತ್ತಿನ ಸ್ವಾಧೀನ 1969 ರಿಂದ 1974 ರವರೆಗೆ ತಿಮ್ಮಯ್ಯ ಬಿನ್ ರಂಗಶಾಮಯ್ಯ ನಂತರ 1974 ರಿಂದ ವಾದಿಯ ಕುಟುಂಬದ ಸ್ವಾಧೀನದಲ್ಲಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಆಸ್ತಿಯನ್ನು ಮಾರಾಟ ಮಾಡಿದ್ದರೂ ಸಹ ಪಹಣಿ 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲೆ ಮುಂದುವರೆಯುತ್ತಿದ್ದುದರ ದುರುಪಯೋಗ

ಪಡಿಸಿಕೊಂಡು 1 ರಿಂದ 4 ನೇ ಪ್ರತಿವಾದಿಯರು ಶಾಮೀಲಾಗಿ ದಾವೆಯನ್ನು ಹೂಡಿ , ರಾಜೀ ಮಾಡಿಕೊಂಡು ನನಗೆ ಸುಳ್ಳು ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನನಗೆ ಆದಂತಹ ಕ್ರಯಪತ್ರದ ಆಧಾರದ ಮೇರೆಗೆ ನಾನು ಯಾವುದೇ ಕಾಲದಲ್ಲಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನಗೆ ಕ್ರಯಪತ್ರ ಬರೆದುಕೊಡುವ ಪೂರ್ವದಲ್ಲಿ 1 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ.

10. 1 ರಿಂದ 4 ನೇ ಪ್ರತಿವಾದಿಗಳು ನನ್ನ ಹತ್ತಿರ ವಿಶ್ವಾಸದಿಂದ ಇರುತ್ತಾರೆ ಎಂದರೆ ಸರಿ. 1 ರಿಂದ 4 ನೇ ಪ್ರತಿವಾದಿಗಳು ನ್ಯಾಯಾಲಯದಲ್ಲಿ ನನ್ನ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ 1 ರಿಂದ 4 ನೇ ಪ್ರತಿವಾದಿಗಳೊಂದಿಗೆ ಶಾಮೀಲಾಗಿ ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

11. ವಾದಿಯ ತಂದೆ ದಾವಾ ಸತ್ತನ್ನು ಖರೀದಿ ಮಾಡಿದ ನಂತರ ಬ್ಯಾಲ್ಯಾದ ವಿ.ಎಸ್.ಎಸ್.ಎನ್ ಬ್ಯಾಂಕ್ ನಲ್ಲಿ ಸಾಲ ಪಡೆದುಕೊಂಡಿರುತ್ತಾರೆ , ಅದರ ಬಗ್ಗೆ ನಿಮಗೆ ಗೊತ್ತಿರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಅದು ಗೊತ್ತಿರುವುದಿಲ್ಲ , ಅದು ಸುಳ್ಳು ಎಂದು ಉತ್ತರಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ